1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

**ಅಸಲು ದಾವಾ ನಂ.** 178/2013 **ಡಿ ಡಬ್ಲ್ಯೂ :** 2

**(ಇಂದು ದಿನಾಂಕಃ 30.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ– ವಾದಿ ಪರ ಶ್ರೀ. ಸಿ ಎಂ ಸಿ ವಕೀಲರಿಂದ.**

1ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. ನನ್ನನ್ನು ಸಾಕ್ಷಿ ಹೇಳಬೇಕು ಎಂದು ನ್ಯಾಯಾಲಯಕ್ಕೆ 1ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ಅವರಿಗೆ ನನ್ನ ಫೋನ್ ನಂಬರ್ ಹೇಗೆ ಸಿಕ್ಕಿತು ಎಂದರೆ ಸಾಕ್ಷಿಯು ನಾನೇ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ಅವರು ನಮ್ಮ ಊರಿಗೆ ಬಂದು ಫೋನ್ ನಂಬರ್ ತೆಗೆದುಕೊಂಡು ಬಂದಿರುತ್ತಾರೆ. ಆ ರೀತಿ ಫೋನ್ ನಂಬರ್ ತೆಗೆದುಕೊಂಡು ಬಂದು ಸುಮಾರು 2–3 ವರ್ಷ ಆಗಿರುತ್ತದೆ. ಸಿದ್ದಮ್ಮ ನನಗೆ ಪರಿಚಯಸ್ಥರು, ಅವರು ನಮ್ಮ ಊರಿಗೆ ಹಂದಿ ಮೇಯಿಸಲು ಬರುತ್ತಿದ್ದರು. ನಾನು ಸಣ್ಣವನಾಗಿದ್ದಾಗಿನಿಂದಲೂ ಸುಮಾರು 25 ವರ್ಷಗಳಿಂದ ಹಂದಿ ಮೇಯಿಸಲು ಬರುತ್ತಿದ್ದರು. ಬಂಟೇನಹಳ್ಳಿಯಿಂದ ಮುದಿಗೆರೆ ಗ್ರಾಮಕ್ಕೆ ಎಷ್ಟು ದೂರು ಆಗುತ್ತದೆ ಎಂದರೆ ಸಾಕ್ಷಿಯು ಒಂದೂವರೆ ಕಿ ಮೀ ಆಗುತ್ತದೆ ಎಂದು ಉತ್ತರಿಸುತ್ತಾರೆ. 25 ವರ್ಷ ಹಿಂದೆ ಬಿಟ್ಟು ಮತ್ತೆ ಅವರು ಹಂದಿ ಮೇಯಿಸಲು ಬಂದಿರುವುದಿಲ್ಲ. ಸಿದ್ದಮ್ಮರವರನ್ನು 25 ವರ್ಷದ ಹಿಂದೆ ನನ್ನನ್ನು ಎಲ್ಲಿಗೂ ಕರೆಸಿರುವುದಿಲ್ಲ. ಸಿದ್ದಮ್ಮನ ತಂದೆ ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಸಿದ್ದಮ್ಮನ ಗಂಡನ ಹೆಸರು ಗೋಪಾಲ ಜೋಗಿ. ಅವರ ಗಂಡನ ಹೆಸರು ಗೋಪಾಲ ಜೋಗಿ ಎಂದು ಯಾರು ಹೇಳಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಹೇಳುತ್ತಿದ್ದರು ಎಂದು ಉತ್ತರಿಸುತ್ತಾರೆ. ಸಿದ್ದಮ್ಮ

ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸಿದ್ದಮ್ಮನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಮೂರು ಜನ ಇರಬಹುದು ಎಂದು ಉತ್ತರಿಸುತ್ತಾರೆ.ಮೊದಲನೆಯವರು ಸತ್ಯಮ್ಮ, ಈ ಕೇಸಿನ ವಾದಿ ಎಂದು ಉತ್ತರಿಸುತ್ತಾರೆ. ಈ ಕೇಸಿನ 2ನೇ ಪ್ರತಿವಾದಿ ಕೃಷ್ಣಜೋಗಿಯವರ ತಂದೆ ಹೆಸರು ಏನು ಎಂದರೆ ಸಾಕ್ಷಿಯು ಗೋಪಾಲ ಜೋಗಿ ಎಂದು ಉತ್ತರಿಸುತ್ತಾರೆ. 2ನೇ ಪ್ರತಿವಾದಿಯ ತಂದೆ ಹೆಸರು ಗೋಪಾಲಜೋಗಿ ಎಂದು ಯಾರು ಹೇಳಿದರು ಎಂದರೆ ಸಾಕ್ಷಿಯು ಮೊದಲು ನನ್ನ ತಂದೆ ಹೇಳಿದರು , ನಂತರ ಸಿದ್ದಮ್ಮನವರು ವಿಲ್ ಮಾಡಿದಾಗ ಅವರು ಹೇಳಿದರು ಎಂದು ಉತ್ತರಿಸುತ್ತಾರೆ.

ನನ್ನ ತಂದೆ ತೀರಿಕೊಂಡು ಈಗ 15 ವರ್ಷ ಆಗಿರುತ್ತದೆ. ವಿಲ್ ಬರೆದಿದೆ ಎಂದು ಹೇಳಿದಾಗ ನಿನ್ನ ತಂದೆ ಬದುಕಿದ್ದರಾ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಕೃಷ್ಣ ಜೋಗಿ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕತಂಗಿಯರು ಎಂದು ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿ ಯಾವ ಊರಿನವರು ಎಂದರೆ ಸಾಕ್ಷಿಯು ಬಂಟೇನಹಳ್ಳಿಯವರು ಎಂದು ಉತ್ತರಿಸುತ್ತಾರೆ. ವಾದಿಯ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. ಅವರ 2ನೇ ಮಗಳು ಯಲ್ಲಮ್ಮ, ಅವರ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. ಅವರ ಮಧ್ಯೆ ಯಾವಾಗ ವಿಭಾಗ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ವಿಲ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ವಿಲ್ ನಲ್ಲಿ ಸತ್ಯಮ್ಮ, ಯಲ್ಲಮ್ಮ ಮತ್ತು ಕೃಷ್ಣಾಜೋಗಿರವರ ಮಧ್ಯೆ ವಿಭಾಗ ಆದ ಬಗ್ಗೆ ಬರೆದಿದ್ದಾರಾ ಎಂದರೆ ಸಾಕ್ಷಿಯು ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ವಿಲ್ ಬರೆದ ಆಸ್ತಿ ವಿಭಾಗದಲ್ಲಿ ಸತ್ಯಮ್ಮ,

ಯಲ್ಲಮ್ಮ ಮತ್ತು ಕೃಷ್ಣಾಜೋಗಿರವರಿಗೆ ಹೋಗಿದೆಯಾ ಎಂದರೆ ಸಾಕ್ಷಿಯು ಅವರಿಗೆ ಯಾರಿಗೂ ಹೋಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಿದ್ದಮ್ಮನಿಗೆ ವಿಲ್ ಬರೆದ ಆಸ್ತಿ ಯಾವ ರೀತಿ ಬಂತು ಎಂದರೆ ನನಗೆ ಗೊತ್ತಿಲ್ಲ. ವಿಲ್ ನಲ್ಲಿ ಅವರಿಗೆ ಸದರಿ ಆಸ್ತಿ ಯಾವ ರೀತಿ ಬಂತು ಎಂದು ಬರೆದಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

ನಿಡಿ–11 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದು ಹೇಳಿರುತ್ತೇನೆ. ಎಷ್ಟು ಗಂಟೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಅಂದಾಜು 11 ರಿಂದ 12 ಗಂಟೆಗೆ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಎಷ್ಟು ಪುಟಗಳಲ್ಲಿ ವಿಲ್ ಬರೆದರು ಎಂದರೆ ನನಗೆ ಗೊತ್ತಿಲ್ಲ, ಎಷ್ಟು ರೂ ನ ಸ್ಟಾಂಪ್ ಪೇಪರ್ ನಲ್ಲಿ ಬರೆದರು ಎಂದರೆ ನನಗೆ ಗೊತ್ತಿಲ್ಲ. ಸ್ಟಾಂಪ್ ಪೇಪರನ್ನು ಯಾರು ತರಿಸಿದರು ಎಂದರೆ ಸಾಕ್ಷಿಯು ಸಿದ್ದಮ್ಮನವರು ತರಿಸಿದರು ಎಂದು ಉತ್ತರಿಸುತ್ತಾರೆ. ನಾನು ಸಹಿ ಮಾಡುವ ಮೊದಲು ಪತ್ರ ಬರೆದು ಆಗಿತ್ತಾ ಎಂದರೆ ಸಾಕ್ಷಿಯು ಆಗಿತ್ತು ಎಂದು ಉತ್ತರಿಸುತ್ತಾರೆ. ನಿ3–11 ಅನ್ನು ಎಲ್ಲಿ ಬರೆದರು ಎಂದರೆ ಸಾಕ್ಷಿಯು ಟೈಪ್ ಮಾಡಿ ಬಂದಿರುತ್ತಾರೆ ಎಲ್ಲಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸಹಿಯನ್ನು ತಾಲ್ಲೂಕು ಕಛೇರಿಯಲ್ಲಿ ಮಾಡಿರುತ್ತೇನೆ. ನಾನು 12 ಗಂಟೆಗೆ ತಾಲ್ಲೂಕು ಕಛೇರಿಗೆ ಹೋಗಿರುತ್ತೇನೆ. ನಿಡಿ–11 ರ ಡೀಡ್ ರೈಟರ್ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ–11 ಕ್ಕೆ ನಾನು ಮೊದಲು ಸಹಿ ಮಾಡಿದೆನಾ ಅಥವಾ ಶಂಕರಶೆಟ್ಟಿ ಸಹಿ ಮಾಡಿದರಾ ಎಂದರೆ ಸಾಕ್ಷಿಯು ನಾನು ಮೊದಲು ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಹೋಗಿ ಐದು ನಿಮಿಷಕ್ಕೆ ಅವರು ಬಂದಿರುತ್ತಾರೆ. ನಾವೆಲ್ಲರೂ ಒಟ್ಟಿಗೆ ಸಹಿ ಮಾಡಿರುತ್ತೇವೆ. ಸಿದ್ದಮ್ಮನ ಹೆಬ್ಬೆಟ್ಟಿನ ಗುರುತನ್ನು

ಯಾರು ಮಾಡಿದ್ದರು ಎಂದರೆ ಸಾಕ್ಷಿಯು ನಾನೇ ಮಾಡಿದ್ದೆ ಎಂದು ಉತ್ತರಿಸುತ್ತಾರೆ. ನಾವು ಸಹಿ ಮಾಡುವ ಮೊದಲೇ ಸಿದ್ದಮ್ಮ ಹೆಬ್ಬೆಟ್ಟಿನ ಗುರುತು ಹಾಕಿದ್ದರಾ ಎಂದರೆ ಸಾಕ್ಷಿಯು ಅವರು ಹಾಕಿದ ನಂತರ ನಾವು ಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ. ಎಷ್ಟು ಹೆಬ್ಬೆಟ್ಟಿನ ಗುರುತು ಹಾಕಿದ್ದರು ಎಂದರೆ ಸಾಕ್ಷಿಯು ಎರಡು ಹಾಕಿರಬಹುದು ಎಂದು ಉತ್ತರಿಸುತ್ತಾರೆ. ಶಂಕರಶೆಟ್ಟಿಯವರ ಪರಿಚಯ ನನಗೆ ಇರುವುದಿಲ್ಲ. ಅವರು ಸೊಪ್ಪಿನಹಳ್ಳಿಯವರು ಎಂದು ಸಿದ್ದಮ್ಮನವರು ಹೇಳಿರುತ್ತಾರೆ. ನಿಡಿ-11 ಮಾಡಿದ ದಿನ 1ನೇ ಪ್ರತಿವಾದಿ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿಗೆ ಎಷ್ಟು ವರ್ಷ ಎಂದು ವಿಲ್ ನಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಯಾರು ಕರೆದುಕೊಂಡು ಬಂದರು ಎಂದರೆ ಸಾಕ್ಷಿಯು ನಾನು ಬಂಟನಹಳ್ಳಿಗೆ ಬಂದಿದ್ದಾಗ ಸಿದ್ದಮ್ಮ ನನಗೆ ವಿಷಯ ತಿಳಿಸಿ ಸಹಿ ಮಾಡಲು ಹೇಳಿರುತ್ತಾರೆ ಎಂದು ಹೇಳುತ್ತಾರೆ.

1ನೇ ಪ್ರತಿವಾದಿ ಮತ್ತು ನಾನು ಸ್ನೇಹಿತರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ವಿಲ್ ಅನ್ನು ತಯಾರಿಸಿ ಆತ ನನ್ನ ಸ್ನೇಹಿತನಾಗಿದ್ದರಿಂದ ಆತನ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಮ್ಮ ನನಗೆ ಪರಿಚಯಸ್ಥರಲ್ಲ ಮತ್ತು ಯಾವತ್ತೂ ವಿಲ್ ಬರೆಯುತ್ತಿದ್ದೇನೆ ಬಂದು ಸಾಕ್ಷಿಯಾಗಿ ಸಹಿ ಮಾಡು ಎಂದು ನನ್ನನ್ನು ಕರೆದಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-11 ರಲ್ಲಿರುವ ಹೆಬ್ಬೆಟ್ಟಿನ ಗುರುತು ಸಿದ್ದಮ್ಮನದ್ದಲ್ಲ ಎಂದರೆ ಸರಿಯಲ್ಲ. ಶಂಕರಶೆಟ್ಟಿಯವರು ನಿಡಿ-11 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ ಮತ್ತು ಶಂಕರಶೆಟ್ಟಿ ಎಂಬುವರು ಯಾರೂ ಇಲ್ಲ ಎಂದರೆ ಸರಿಯಲ್ಲ. ಸಿದ್ದಮ್ಮ ಯಾವುದೇ ವಿಲ್ ಬರೆಯದೇ ಇದ್ದರೂ ದಿಃ 25-11-2009 ರಂದು

ಮರಣ ಶಾಸನ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಸಿದ್ದಮ್ಮ ಯಾವುದೇ ವಿಲ್ ಬರೆದಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-11 ರಲ್ಲಿರುವ ದೇವರಾಜು ಎಂಬ ಸಹಿ ನನ್ನದಲ್ಲ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿ ಪರವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**